ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, the 15th May 1979/Vaishaka 25, 1901 S.E.

The House met in the Assembly Chamber, Vidhana Soudha, at Twelve of the Clock.

[MR. SPEAKER (SRI P. VENKATARAMANA) in the Chair]

STARRED QUESTIONS
(to which oral answers were given)

Acquisition of Land for Sites in Siruguppa and Tekkalakota Towns.

451 SRI B. E. RAMAIAH (Siruguppa).—Will the Minister of State for Housing be pleased to state :—

(a) the number of landless and houseless persons in Siraguppa and Tekkalkota Towns in Siraguppa Taluk.

(b) whether the Government intend to take immediate action to acquire lands for providing sites?

SRI H. C. SREEKANTAIAH (Minister for Municipal Administration) [on behalf of Shri P. F. RODRIGUES (Minister of State for Housing)].—

(a) There are 924 and 300 landless persons respectively in Siraguppa and Tekkalkota Town and Siraguppa Taluk.

(b) Yes.

ಶ್ರೀ ಬಿ. ಇ. ರಾಮಯ್ಯ.—ತಾವು ಈ ಪ್ರಶ್ನೆಯು (ಅ) ಗೆ ಉತ್ತರವಾಗಿ ಸಿರಗುಪ್ಪ ಹಾಗೂ ತೆಕ್ಕಲಕೋಟೆ ಟೌನ್‌ಗಳಲ್ಲಿ ೯೨೪ ನಿವೇಶನ ರಹಿತ ಹಾಗೂ ೩೦೦ ಮಂದಿ ಭೂರಹಿತ ವ್ಯಕ್ತಿಗಳಿದ್ದಾರೆ ಎಂದು ಹೇಳಿದ್ದೀರಿ. ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಅವರಿಗೆ ಪ್ರಪೋಸ್ ಮಾಡಿದ್ದೀರಿ?

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ೫೫.೮೩ ಮತ್ತು ೧೦.೫೭ ಎಕರೆಯಷ್ಟು ಜಮೀನನ್ನು ಸಿರಗುಪ್ಪ ಮತ್ತು ತೆಕ್ಕಲಕೋಟೆ ಟೌನ್‌ನಲ್ಲಿರುವ ಭೂರಹಿತ ಜನರಿಗೆ ಕೊಡುವುದಕ್ಕೆ ಅಷ್ಟು ಜಮೀನನ್ನು ಅಕ್ವೈರ್ ಮಾಡಿಕೊಳ್ಳಬೇಕೆಂದು ಪ್ರಪೋಸ್ ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಸತತವಾಗಿ ೩ ವರ್ಷದಿಂದಲೂ ಕೂಡ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದರೂ ಕೂಡ ಇನ್ನೂ ಏನೂ ಕೆಲಸವಾಗಿಲ್ಲ. ಆದುದರಿಂದ ಇದನ್ನು ಪೂರ್ಣ ಮಾಡಬೇಕಾದರೆ ಇನ್ನು ಎಷ್ಟು ಕಾಲಬೇಕಾಗುತ್ತದೆ ಅನ್ನುವುದನ್ನು ತಿಳಿಸುತ್ತೀರಾ?

---

† Indicates that remarks or Speeches have not been revised by the members concerned.

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ, ಅಸಿಸ್ಟೆಂಟ್ ಕಮೀಷನರ್ ಈಗಾಗಲೇ ೩೩ ಕೇಸುಗಳಿಗೆ ಅವಾರ್ಡ್ ಪಾಸ್ ಮಾಡಿದ್ದಾರೆ. ಮತ್ತು ಡಿವಿಷನಲ್ ಕಮಿಷನರ್ ಈ ಸಿರಗುಪ್ಪ ಮತ್ತು ತೆಕ್ಕಲಕೋಟೆ ಪ್ರೊಸೀಡಿಂಗ್ಸ್‌ನ್ನು ಕಂಪ್ಲೀಟ್ ಮಾಡಬೇಕಾದರೆ ಮೊದಲನೆಯದಕ್ಕೆ ೩ ತಿಂಗಳು ಮತ್ತು ಎರಡನೇದಕ್ಕೆ ೫ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—ಮಾನ್ಯ ಮಂತ್ರಿಗಳು ಸಿರಗುಪ್ಪ ಪ್ರೊಸೀಡಿಂಗ್ಸ್‌ನ್ನು ಕಂಪ್ಲೀಟ್ ಮಾಡಬೇಕಾದರೆ ೩ ತಿಂಗಳು ಹಾಗೂ ತೆಕ್ಕಲಕೋಟೆ ಪ್ರೊಸೀಡಿಂಗ್ಸ್ ಅನ್ನು ಪೂರ್ಣ ಮಾಡಬೇಕಾದರೆ ೫ ತಿಂಗಳು ಬೇಕಾಗುತ್ತದೆ ಎಂದು ಹೇಳಿದರು. ಬಹಳ ಸಂತೋಷ. ಆಗಲಾದರೂ ಕೂಡ ಜಾಗ್ರತೆಯಾಗಿ ಆ ಜನರಿಗೆ ನಿವೇಶನ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಇದರ ಬಗ್ಗೆ ಡಿವಿಷನಲ್ ಕಮೀಷನರ್‌ರವರಿಂದ ರಿಪೋರ್ಟ್ ಕಾಲ್‌ಫಾರ್ ಮಾಡಿದ್ದೇನೆ. ಮತ್ತು ಅಸಿಸ್ಟೆಂಟ್ ಕಮೀಷನರ್‌ರವರು ಈಗಾಗಲೇ ೩೩ ಕೇಸುಗಳಲ್ಲಿ ಅವಾರ್ಡ್ ಪಾಸ್ ಮಾಡಿದ್ದಾರೆ. ನಾನು ಮೊದಲೇ ಹೇಳಿದ ಹಾಗೆ ಸಿರಗುಪ್ಪಕ್ಕೆ ಸೇರಿದ ಪ್ರೊಸೀಡಿಂಗ್ಸ್ ಅನ್ನು ಕಂಪ್ಲೀಟ್ ಮಾಡಬೇಕಾದರೆ ೩ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಹಾಗೂ ತೆಕ್ಕಲಕೋಟೆ ಟೌನ್‌ಗೆ ಸೇರಿದಂಥಾ ಪ್ರೊಸೀಡಿಂಗ್ಸ್‌ನ್ನು ಪೂರ್ಣ ಮಾಡಬೇಕಾದರೆ ೫ ತಿಂಗಳು ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಸಾಧ್ಯವಾದಷ್ಟು ಆಷ್ಟರೊಳಗೆ ಆದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ತಾವು ಈಗತಾನೇ ೩ ತಿಂಗಳು ಮತ್ತು ೫ ತಿಂಗಳೊಳಗೆ ಆ ಕೆಲಸಗಳು ಮುಗಿಯುತ್ತದೆ ಎಂದು ಹೇಳಿದಿರಿ ಈ ಒಂದು ವ್ಯವಹಾರ ೩-೪ ವರ್ಷದಿಂದಲೂ ಕೂಡ ನಡೆಯುತ್ತಾ ಇದೆ. ಆದುದರಿಂದ ಅಲ್ಲಿನ ಜನರಿಗೆ ತೊಂದರೆಯಾಗದಂತೆ ತಾವು ಆಸೆಂಬ್ಲಿಯಲ್ಲಿ ಏನು ಹೇಳಿದ್ದೀರೋ ಆ ಪ್ರಕಾರ ಆದಷ್ಟು ಜಾಗ್ರತೆ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಬೇಗನೆ ಕೊಡಿಸುತ್ತೀರಾ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಸಾಮಾನ್ಯವಾಗಿ ಈ ಆಕ್ವಿಸಿಷನ್ ಕೇಸಸ್ ನಿದಾನವಾಗುವುದು ಸಹಜವೇ. ತಮಗೆ ಗೊತ್ತಿರುವ ಹಾಗೆ ಈ ಬಗ್ಗೆ ಬೇಕಾದಷ್ಟು ಪ್ರಾಬ್ಲೆಮ್ಸ್ ಬರುತ್ತವೆ. ಈ ಬಗ್ಗೆ ಕೋರ್ಟಿಗೆ ಹೋಗಿದ್ದರು. ಆದುದರಿಂದ ನಾನು ಮಾನ್ಯ ಸದಸ್ಯರಿಗೆ ಮೊದಲೇ ಹೇಳಿದ್ದೇನೆ ಏನೆಂದರೆ ಆದಷ್ಟು ಜಾಗ್ರತೆಯಾಗಿ ಈ ಬಗ್ಗೆ ಏನೇನು ಕೆಲಸಗಳು ಆಗಬೇಕೋ ಆದನ್ನು ಮುಗಿಸಿ ಅವರಿಗೆ ಆ ಜಮೀನನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೆಗಳು ಬಂದಾಗ ಎಷ್ಟೋ ಸದಸ್ಯರು ಹಾಜರಿರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ನಮ್ಮ ಎದುರು ಪಕ್ಷದವರನ್ನು ನೋಡಿದರೂ ಸಹ ಅಲ್ಲಿ ೩-೪ ಜನರನ್ನು ಕೂತಿರುವುದನ್ನು ಬಿಟ್ಟರೆ ಬೇರೆ ಯಾರೂ ಇಲ್ಲಾ. ಹಾಗೆ ನಮ್ಮಲ್ಲೂ ಕೂಡ ಸ್ವಲ್ಪ ಸ್ವಲ್ಪ ಖಾಲಿಯಾಗಿದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಜನತಾಪಕ್ಷದ ಸದಸ್ಯರು ೩-೪ ಜನರನ್ನು ಬಿಟ್ಟರೆ ಬಾಕಿ ಜಾಗ ವೆಲ್ಲಾ ಪಾಗೆಯೇ ಖಾಲಿಯಾಗಿವೆ.

ಅಧ್ಯಕ್ಷರು.—ಅವರು ಏನಾದರೂ ಮಾಡಿಕೊಳ್ಳಲಿ ತಾವು ಸರಿಯಾಗಿ ಇರಬೇಡವೇ?

Deposit of amount of Gadag Co-operative Textile Mills Ltd., Hulkoti, in a bank under Liquidation

1036. SRI C. S. MUTTINPENDIMATH (Gadag).—Will the Minister for Co-operation be pl ased to state :—

(a) whether it has come to the notice of the Government that a huge sum of money belonging to Gadag Co-operative Textile Mill Ltd., Hulkoti, has been deposited in a Bank which is under Liquidation;